ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/01/ನಿಆಶಾ/2024

ಆಯುಕ್ತರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ: 05.09.2024.

## ಸುತ್ತೋಲೆ

ವಿಷಯ: ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ/ ಭೋಧಕೇತರ ಸಿಬ್ಬಂದಿಗಳು, ಆಯುಕ್ತಾಲಯ / ಉನ್ನತ ಶಿಕ್ಷಣ ಇಲಾಖೆ, ಎಂ.ಎಸ್.ಬಿಲ್ಡಿಂಗ್‌ನಲ್ಲಿ ಕಾಣಿಸಿಕೊಳ್ಳುತ್ತಿರುವ ಬಗ್ಗೆ.

********

ಅನುದಾನಿತ ಶಿಕ್ಷಣ ಸಂಸ್ಥೆಯಲ್ಲಿ (ಇಂಜಿನಿಯರಿಂಗ್ ಕಾಲೇಜು ಹಾಗೂ ಪಾಲಿಟೆಕ್ನಿಕ್ ಸಂಸ್ಥೆ) ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು (ಬೋಧಕ/ಭೋಧಕೇತರ) ತಮ್ಮ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಪ್ರತಿನಿತ್ಯ ಆಯುಕ್ತಾಲಯ/ಉನ್ನತ ಶಿಕ್ಷಣ ಇಲಾಖೆ, ಎಂ.ಎಸ್.ಬಿಲ್ಡಿಂಗ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದು, ಆಯುಕ್ತರು/ನಿರ್ದೇಶಕರ ಗಮನಕ್ಕೆ ಬಂದಿದ್ದು, ಈ ವಿಷಯವನ್ನು ತೀವ್ರತರವಾಗಿ ಪರಿಗಣಿಸಲಾಗಿದೆ.

ಆದ್ದರಿಂದ ಈ ಸಂಬಂಧ ಕೆಲವು ಕಟ್ಟುನಿಟ್ಟಿನ ನಿರ್ದೇಶನಗಳನ್ನು ಕೆಳಕಂಡಂತೆ ನೀಡಲಾಗಿದೆ.

1. ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಸಲ್ಲಿಸುವ ಪ್ರಸ್ತಾವನೆಗಳಿಗೆ ಅಗತ್ಯವಿದ್ದಲ್ಲಿ ಮಾತ್ರ ಆ ಸಂಸ್ಥೆಯ ಪ್ರಾಂಶುಪಾಲರು/ಅವರಿಂದ ನೇಮಿಸಲ್ಪಟ್ಟ ನಾಮನಿರ್ದೇಶನ ಹೊಂದಿದ ಸಿಬ್ಬಂದಿ ಮಾತ್ರ ಪೂರ್ವಾನುಮತಿ ಪಡೆದು ಆಯುಕ್ತಾಲಯದ ಕಛೇರಿಗೆ ಭೇಟಿ ನೀಡುವುದು.

2. ಅನುದಾನಿತ ಶಿಕ್ಷಣ ಸಂಸ್ಥೆಯವರು ಯಾವುದೇ ಪ್ರಸ್ತಾವನ ಸಲ್ಲಿಸಿದ್ದಲ್ಲಿ, ಸದರಿ ಪ್ರಸ್ತಾವನೆಗೆ ಬೇಕಾಗುವ ಪೂರಕ ದಾಖಲಾತಿಗಳನ್ನು ನಿಯಮಾನುಸಾರ ಮೊದಲೇ ಸಲ್ಲಿಸುವಂತೆ ಸೂಚಿಸಲಾಗಿದ್ದು, ವಿನಃ ಕಾರಣ ಪತ್ರ ವ್ಯವಹಾರ/ ಸಿಬ್ಬಂದಿಗಳನ್ನು ಕಳುಹಿಸುವುದು ರೂಢಿ ಮಾಡಿಕೊಳ್ಳಬಾರದೆಂದು ಸೂಚಿಸಲಾಗಿದೆ.

3. ಆದಾಗ್ಯೂ ಕೆಲವು ಕಾಲೇಜಿನ ಸಿಬ್ಬಂದಿಗಳು ಆಯುಕ್ತಾಲಯದಲ್ಲಿ/ ಉನ್ನತ ಶಿಕ್ಷಣ ಇಲಾಖೆಯ ಕಛೇರಿಗೆ ಬರುತ್ತಿದ್ದು, ಕಛೇರಿ ಸಮಯದಲ್ಲಿ ವಿನಃ ಕಾರಣ ಇಲಾಖೆಗೆ ಸಂಬಂಧಿಸಿದ ಸಿಬ್ಬಂದಿಗಳು ಸುಸೂತ್ರವಾಗಿ ಕೆಲಸ ನಿರ್ವಹಿಸಲು ಅಡಚಣೆಯಾಗುತ್ತಿರುತ್ತದೆ. ಇದ್ದರಿಂದ ಪ್ರಸ್ತಾವನೆಗೆ ಅನುಮತಿಗೂ ಕೂಡ ವಿಳಂಬವಾಗುತ್ತದೆ.

4. ಎಲ್ಲಾ ಅನುದಾನಿತ ಶಿಕ್ಷಣ ಸಂಸ್ಥೆಯಲ್ಲಿ(ಇಂಜಿನಿಯರಿಂಗ್ ಕಾಲೇಜು ಹಾಗೂ ಪಾಲಿಟೆಕ್ನಿಕ್ ಸಂಸ್ಥೆ) ಇತ್ತೀಚಿಗೆ A.B.A.S( Aadhaar Based Biometric Attendance system) ಅಳವಡಿಸಲಾಗಿದ್ದು, ತಮ್ಮ ವೇತನವನ್ನು ಸಹ ಹಾಜರಾತಿ ದಾಖಲಾತಿ ಆಧಾರದ ಮೇಲೆ ಕ್ರಮವಹಿಸಲಾಗುವುದು. ಆದ್ದರಿಂದ ವಿನಃ ಕಾರಣ ಆಯುಕ್ತಾಲಯದಲ್ಲಿ/ ಉನ್ನತ ಶಿಕ್ಷಣ ಇಲಾಖೆಯಲ್ಲಿ ಓಡಾಡುವುದು ಗೈರುಹಾಜರಿಯೆಂದು ಪರಿಗಣಿಸಲಾಗುವುದು. (ಪ್ರಾಚಾರ್ಯರ ಅನುಮತಿ ಇಲ್ಲದ್ದಿದ್ದಲ್ಲಿ) ಇದೇ ಪ್ರವೃತ್ತಿ ಮುಂದುವರಿಸಿದ್ದಲ್ಲಿ ಶಿಸ್ತುಕ್ರಮ ಕೈಗೊಳ್ಳಲು ಸಂಬಂಧಿಸಿದ ಸಂಸ್ಥೆಗಳಿಗೆ ಶಿಫಾರಸ್ಸು ಮಾಡಲಾಗುವುದು.



MEMO

Scanned with OKEN Scanner

5. ನಿರ್ದೇಶನಾಲಯದಲ್ಲಿನ ಕೆಲಸಗಳಿಗೆ ಬರುವುದು ಅನಿವಾರ್ಯವಾಗಿದ್ದರೆ, ಮಧ್ಯಾಹ್ನ 3:00 ಗಂಟೆಯ ನಂತರ ಬರಲು ತಿಳಿಸಲಾಗಿದೆ.

6. ತಮ್ಮಗಳ ಪ್ರಸ್ತಾವನೆಗಳ ಬಗ್ಗೆ ವೈಯಕ್ತಿಕವಾಗಿ ಈ ಕಛೇರಿಗೆ ಭೇಟಿ ಮಾಡಬಾರದೆಂದು, ಹಾಗೂ ಸದರಿ ಪ್ರಸ್ತಾವನೆಗಳ ವಸ್ತುಸ್ಥಿತಿ/ಚಲನವಲನಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಂಸ್ಥೆಯಲ್ಲಿಯೇ ವಿಚಾರಿಸಿಕೊಳ್ಳಲು ಸೂಚಿಸಿದೆ.

**ಎಲ್ಲಾ ಅನುದಾನಿತ ಶಿಕ್ಷಣ ಸಂಸ್ಥೆಯ (ಇಂಜಿನಿಯರಿಂಗ್ ಕಾಲೇಜು ಹಾಗೂ ಪಾಲಿಟೆಕ್ನಿಕ್ ಸಂಸ್ಥೆ) ಪ್ರಾಚಾರ್ಯರು ಈ ಮೇಲೆ ತಿಳಿಸಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಿದೆ.**

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ

<u>ಇವರಿಗೆ,</u>

ಎಲ್ಲಾ ಅನುದಾನಿತ ಶಿಕ್ಷಣ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ,

<u>ಪ್ರತಿ:</u>

1. ಅನುದಾನಿತ ಸಿಬ್ಬಂದಿ ವಿಭಾಗ.
2. ಲೆಕ್ಕ ಪತ್ರ / ಟಿಬಿಎಸ್ ವಿಭಾಗ.
3. ಎಸಿಎಂ, ವಿಭಾಗ.
4. ಇಎಸ್‌ಟಿ (9) ವಿಭಾಗ.
5. ಹೆಚ್‌ಆರ್‌ಎಂಎಸ್ / ನಗದು ವಿಭಾಗ
6. ಕಡತ.

MEMO